ಆ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಆರೋಗ್ಯ ಇಲಾಖೆಯ ಟಾಸ್ಕ್‌ಫೋರ್ಸ್ ಮಧ್ಯಂತರ ವರದಿಯಲ್ಲಿ ಈ ಸಂಬಂಧವಾಗಿ ಕೊಂಚ ನಮೂದಿಸಲಾಗಿದೆ.

ಆ) ಕೆಲವು ಸರಣಿಗಳೂ ಸ್ವೀಕೃತವಾಗಿದ್ದು ಅವುಗಳನ್ನು ಪರಿಶೀಲಿಸಲಾಗುತ್ತಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಗ್ರಾಮಾಂತರ ಶಾಲೆಗಳಲ್ಲಿ ಉರ್ದು ಶಿಕ್ಷಕರ ಕೊರತೆ

726(814) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ. (ತುರುವೇಕೆರೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಗ್ರಾಮಾಂತರದಲ್ಲಿ 10 ಶಾಲೆಗಳಿದ್ದು ಕಳೆದ ಹಲವಾರು ವರ್ಷಗಳಿಂದ ಉರ್ದು ಶಿಕ್ಷಕರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಉರ್ದು ಶಿಕ್ಷಕರನ್ನು ಇದುವರೆಗೂ ನೇಮಕಾತಿ ಮಾಡದಿರಲು ಕಾರಣಗಳೇನು?

ಇ) ಇನ್ನು ಎಷ್ಟು ದಿನಗಳಲ್ಲಿ ಉರ್ದು ಶಿಕ್ಷಕರ ನೇಮಕಾತಿ ಮಾಡಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು);

ಅ) ಬಂದಿದೆ

ಆ) ತುರುವೇಕೆರೆ ತಾಲ್ಲೂಕಿನ ಗ್ರಾಮಾಂತರದ 8 ಶಾಲೆಗಳಲ್ಲಿ 10 ಶಿಕ್ಷಕರ ಕೊರತೆ ಇದ್ದು, ಅಗತ್ಯವಿದ್ದಡೆ ನಿಯೋಜನೆ ಮೇಲೆ ಭರ್ತಿ ಮಾಡಲಾಗಿದೆ. ಖಾಲಿ ಇರುವ ಎಲ್ಲಾ ಉರ್ದು ಶಿಕ್ಷಕರ (ಹುದ್ದೆಗಳನ್ನು ಮುಂದಿನ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಭರ್ತಿ ಮಾಡಲಾಗುವುದು.

ತುರುವೇಕೆರೆ ತಾಲ್ಲೂಕು ತಾಳಕೆರೆ ಟಿ.ಸುಬ್ರಹ್ಮಣ್ಯ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣ

728 (816) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ತಾಳಕೆರೆ ಗ್ರಾಮ ವಾಸಿ ಮಾಜಿ ಸಚಿವರ ಹೆಸರಿನಲ್ಲಿ ತಾಳಕೆರೆ ಗ್ರಾಮದಲ್ಲಿ ಆರೋಗ್ಯ ಕೇಂದ್ರ ಪ್ರಾರಂಭ ಆದದ್ದು ಯಾವಾಗ?

ಆ) ಈ ಆಸ್ಪತ್ರೆಗಳ ಸೌಲಭ್ಯಗಳೇನು? ವೈದ್ಯರು ಹಾಗೂ ಸಿಬ್ಬಂದಿ ಎಲ್ಲಿ ಕೆಲಸ ಮಾಡುತ್ತಿದ್ದಾರೆ?

ಇ) ಮುಖ್ಯ ಮಂತ್ರಿಯವರು ಉದ್ಘಾಟನೆ ಮಾಡಿದ ಆಸ್ಪತ್ರೆಯ ಸ್ಥಿತಿಗತಿ ಏನು?

ಈ) ಈ ಆಸ್ಪತ್ರೆಗೆ ಸರ್ಕಾರಿ ಕಟ್ಟಡ ಈ ವರ್ಷ ಕಲ್ಪಿಸಲಾಗುವುದೇ?